**O. S. No:65/2019**
**DW : 1**

(ಇಂದು ದಿನಾಂಕಃ **20-09-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

## ಮುಂದುವರೆದ ಪಾಟೀ ಸವಾಲು ಶ್ರೀ ಎಸ್ ಆರ್ ಎಚ್ ವಕೀಲರಿಂದಃ

ನನಗೆ ಒಕ್ಕಲುತನದ ಆದಾಯ ಹೊರತು ಪಡಿಸಿ ಬೇರೆ ಯಾವುದೇ ಆದಾಯ ಇರುವುದಿಲ್ಲ. ನಾನು ಬ್ಯಾಂಕ್ ಸಾಲವನ್ನು ಬೇರೆಯವರ ಹತ್ತಿರ ಹಣ ಪಡೆದುಕೊಂಡು ಮರುಪಾವತಿಸಿರುತ್ತೇನೆ. ಸದರಿ ಅಂಶವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ಪ್ರತಿವಾದ ಪತ್ರದಲ್ಲಿ ಕಾಣಿಸಿರುವುದಿಲ್ಲ. ನಾನು ಒಕ್ಕಲುತನದ ಆದಾಯದಿಂದಲೇ ಬ್ಯಾಂಕ್ ಸಾಲವನ್ನು ಮರು ಪಾವತಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ಗೆ ಅಡಮಾನ ನೀಡಿರುವ ಜಮೀನನ್ನು ಹೊರತು ಪಡಿಸಿ ಬೇರೆ 50 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ನಿಂದ ಪಡೆದ ಸಾಲವನ್ನು ನನ್ನ ಅಕ್ಕ ತಂಗಿಯವರಿಗೆ ನೀಡಿರುವುದಿಲ್ಲ. ಆದರೆ ಜಮೀನಿನ ಅಭಿವೃದ್ಧಿಗೆ ಬಳಸಿರುತ್ತೇನೆ. ಜಮೀನಿನಲ್ಲಿ ಬೋರವೆಲ್ ಅಳವಡಿಸಿರುವುದಿಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರ ಆದ ಬಗ್ಗೆ 1955 ರಲ್ಲಿ ವರ್ಗಾ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ನನಗೆ ಸದರಿ ಮೃತ್ಯುಪತ್ರ ಇದ್ದ ಬಗ್ಗೆ ನನ್ನ ತಂದೆ ಮೃತಪಟ್ಟ ನಂತರ ಗೊತ್ತಾಗಿರುತ್ತದೆ. ನನ್ನ ತಂದೆ  ಹಾಗೂ ಚಿಕ್ಕಪ್ಪನ ಹೆಸರು ಮೃತ್ಯುಪತ್ರದ ಆಧಾರದ ಮೇಲೆ 1955 ರಲ್ಲಿ ದಾಖಲಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ನನಗೆ ಸರ್ವೇ ನಂಃ 123 ರಲ್ಲಿ 19 ಎಕರೆ 20 ಗುಂಟೆ ಜಮೀನನ್ನು ಬಿಟ್ಟು ಕೊಟ್ಟ ಬಗ್ಗೆ ವರ್ಗಾ ಬದಲಾವಣೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ಸಹೋದರಿಯರಿಗೆ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ.  ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**